ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ, ರಾಯಚೂರು

ಸಿ.ಸಿ. ನಂಬರಃ 1765/2018

CW-13/ PW-04

| | | |
|---|---|---|
| ಸಾಕ್ಷಿದಾರನ ಹೆಸರು | : | ದರ್ಮಣ್ಣ ಟ್ಟಿ |
| ತಂದೆ ಹೆಸರು | : | ಶಿವನ ಗೌಡ್ಡ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಪೊಲೀಸ್ ನಿರೀಕ್ಷಕರು, ಪೊಲೀಸ್ ತರಬೇತಿ ಶಾಲೆ, ಕಾನಾಪುರ್ |
| ವಿಳಾಸ | : | ಕಾನಾಪುರ್, ಬೆಳಗಾವಿ ಜಿಲ್ಲೆ. |

**ಮುಖ್ಯ ವಿಚಾರಣೆ ಅಬಿಯೋಜನೆ ಪರ ಮಾನ್ಯ ಹಿರಿಯ ಸ.ಸ.ಅ.ಅವರಿಂದ**

ಕಲಂ 299 ಸಿ.ಅರ್.ಪಿ.ಸಿ ಅಡಿಯಲ್ಲಿ ಸಾಕ್ಷಿ ವಿಚಾರಣೆ (ಸಾಕ್ಷಿಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ವಿ.ಸಿ ಮೂಲಕ ತೆಗೆದುಕೊಳ್ಳಲಾಗಿರುತ್ತದೆ.

**ಪ್ರಮಾಣೀಕರಿಸಿದ ದಿನಾಂಕಃ 03-08-2026.**

ಸೆಪ್ಟೆಂಬರ್ 2009 ರಿಂದ ಮೇ 2011 ರ ವರೆಗೆ ಮಾರ್ಕೆಟ್ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇವೆ.

2. ದಿನಾಂಕ 01-10-2010 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 07.15 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ಟೈಪ್ ಮಾಡಿಸಿದ ದೂರನ್ನು ನೀಡಿದ್ದು ಅದನ್ನು ಪಡೆದುಕೊಂಡು ಠಾಣ ಮೊ. ಸಂಖ್ಯೆ 78/2010 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

3. ದಿನಾಂಕ 02-10-2010 ರಂದು ಘಟನಾ ಸ್ಥಳಕ್ಕೆ ಬೇಟಿ ನೀಡಿ ದೂರುದಾರರು ತೋರಿಸಿದ ಸ್ಥಳದಲ್ಲಿ ಚಾಸಾ-6 ಮತ್ತು 7 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಬೆ.09.10 ರಿಂದ 10.00 ಗಂಟೆಯ ವರೆಗೆ ಮಾಡಿರುತ್ತೇನೆ. ಅದೇ ದಿನ ಅದೇ ಪಂಚರ ಸಮಕ್ಷಮ ಆರೋಪಿ ಚಾಸಾ-1 ರವರಿಗೆ ನೀಡಿದ್ದ ಚೆಕ್ ಸಂಖ್ಯೆ 108405 ನ್ನು ಮತ್ತು ಜೀನ್ ಚೆಂದ್ ಅಂಗಡಿಯವರು ಶ್ರಿರಂಗ ಬಿಲ್ಡರ್ಸ ಮತ್ತು ಎಜೆನ್ಸಿಯವರಿಗೆ ನೀಡಿದ ರಶೀದಿ ಸಂಖ್ಯೆ 423 ಗಳನ್ನು ಜಪ್ತಿ ಪಂಚನಾಮೆ ಅಡಿಯಲ್ಲಿ ಬೆ. 10.15 ರಿಂದ 11.15 ಗಂಟೆಯ ವರೆಗೆ ವಶಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ಬಂದು ಪಿ.ಎಫ್ ನಂಬರ್ 42/10 ರಡಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ-2 ರವರು ಠಾಣೆಗೆ ಹಾಜರಾಗಿ ಆರೋಪಿತರ ಮೇಲೆ ಮತ್ತೊಂದು ದೂರನ್ನು ಸಲ್ಲಿಸಿದ್ದು ಅದನ್ನು ಸ್ವಿಕರಿಸಿ ಕಡತಕ್ಕೆ

ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಸದರಿ ಸ್ಥಳಕ್ಕೆ ಹೋಗಿ ದೂರುದಾರರು ತೋರಿಸಿದ ಸ್ಥಳದಲ್ಲಿ ಚಾಸಾ-8 ಮತ್ತು 9 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮಾಡಿರುತ್ತೇನೆ. ಅದೇ ಪಂಚರ ಸಮಕ್ಷಮ ದೂರುದಾರರಿಗೆ ನೀಡಿದ ಚೆಕ್ ಸಂಖ್ಯೆ: 108407 ಮತ್ತು ಮಹವೀರ್ ಜೈನ್ ರವರು ಶ್ರೀರಂಗ ಬಿಲ್ಡರ್ಸ ಮತ್ತು ಎಜೆನ್ಸಿಯವರಿಗೆ ನೀಡಿದ ರಶೀದಿ ಸಂಖ್ಯೆ:734 ನ್ನು ಸಂಜೆ 05.10 ರಿಂದ 06.15 ಗಂಟೆಯ ವರೆಗೆ ಪಂಚನಾಮೆ ಅಡಿಯಲ್ಲಿ ವಶಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ಬಂದು ಪಿ.ಎಫ್ ನಂಬರ್ 43/10 ರಡಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

4. ಚಾಸಾ-3 ರಿಂದ 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಈ ಕೇಸಿನ ಮುಂದಿನ ತನಿಖೆಯನ್ನು ಚಾಸಾ-14 ರವರಿಗೆ ವಹಿಸಿಕೊಟ್ಟಿರುತ್ತೇನೆ. ಚಾಸಾ-14 ರವರು ಈಗ ತೀರಿಕೊಂಡಿರುತ್ತಾರೆ. ಚಾಸಾ-14 ರವರು ಈ ಪ್ರಕರಣದಲ್ಲಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ನಿಪಿ-1, 4, 5 ನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಪ್ರ.ವ.ವರದಿಯನ್ನು ಯಥಾ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ದಾಖಲೆಯ ಜಪ್ತಿ ಪಂಚಾಮೆಯ ಯಥಾ ನಕಲನ್ನು ಮತ್ತು ಅಪರಾದ ಸ್ಥಳದ ಪಂಚನಾಮೆಯ ಯಥಾ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು. ಪಂಚನಾಮೆಗಳ ಅಡಿಯಲ್ಲಿ ಜಪ್ತಿ ಪಡಿಸಿಕೊಂಡ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೇಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಅಂತ ಒಪ್ಪಿಕೊಂಡಿರುತ್ತಾರೆ)

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿಜೆಎಂ**
**ನ್ಯಾಯಾಧೀಶರು, ರಾಯಚೂರು.**